ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 7–11–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಕನ್ನಡ ಮತ್ತು ಸಂಸ್ಕೃತಿ ಇಲಾಖೆವತಿಯಿಂದ ಸಂತ ಶ್ರೇಷ್ಠ ಕನಕದಾಸರ ಜಯಂತ್ಯೋತ್ಸವ ಹಾಗೂ 'ಕನಕ ಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ:<br><br>ಪ್ರಶಸ್ತಿ ಪ್ರದಾನ:<br><br>ಶ್ರೀ ಸಿದ್ದರಾಮಯ್ಯ,<br>ಮಾನ್ಯ ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ<br><br>ಮುಖ್ಯ ಅತಿಥಿಗಳು:<br><br>ಶ್ರೀ ಅನಂತಕುಮಾರ್,<br>ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವರು.<br><br>ಶ್ರೀ ರಾಮಲಿಂಗಾರೆಡ್ಡಿ,<br>ಸಾರಿಗೆ ಸಚಿವರು.<br>ಶ್ರೀಮತಿ ಶಾಂತಕುಮಾರಿ,<br><br>ಮಹಾಪೌರರು,<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | 08–11–2014<br>ಶನಿವಾರ<br>ಸಂಜೆ<br>6–00 ಗಂಟೆಗೆ | ರವೀಂದ್ರ ಕಲಾಕ್ಷೇತ್ರ,<br>ಜೆ.ಸಿ.ರಸ್ತೆ,<br>ಬೆಂಗಳೂರು. |

| | | | |
|---|---|---|---|
| | ಶ್ರೀಮತಿ ಉಮಾಶ್ರೀ,<br><br>ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು<br><br><u>ಅಧ್ಯಕ್ಷತೆ:</u><br><br>ಶ್ರೀ ಆರ್. ವಿ. ದೇವರಾಜ್,<br>ವಿಧಾನಸಭಾ ಸದಸ್ಯರು,<br>ಚಿಕ್ಕಪೇಟೆ,<br>ವಿಧಾನಸಭಾ ಕ್ಷೇತ್ರ | | |

ನಿರ್ದೇಶಕರ ಪರವಾಗಿ

<u>ಪತ್ರಿಕಾ ಪ್ರಕಟಣೆ</u>

# ಹೈಕೋರ್ಟ್ ಆದೇಶದಂತೆ ಟನ್ ಕಬ್ಬಿಗೆ 2500/- ರೂ. ಪಾವತಿಸಲು ಸಕ್ಕರೆ ಕಾರ್ಖಾನೆಗಳಿಗೆ ಸಚಿವರ ಸೂಚನೆ

ಬೆಂಗಳೂರು, ನ. 7 (ಕರ್ನಾಟಕ ವಾರ್ತೆ)-

ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ ಸರ್ಕಾರ ನಿಗದಿ ಪಡಿಸಿರುವ 2500/- ರೂ. ಗಳನ್ನು ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಗಳು ಕೂಡಲೇ ಪಾವತಿಸಬೇಕು ಎಂದು ಸಹಕಾರ ಮತ್ತು ಸಕ್ಕರೆ ಸಚಿವ ಶ್ರೀ ಎಚ್.ಎಸ್. ಮಹದೇವ ಪ್ರಸಾದ್ ಅವರು ತಿಳಿಸಿದರು.

ವಿಧಾನಸೌಧದ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳು 2013-14ನೇ ಸಾಲಿಗೆ ಉತ್ತರ ಕರ್ನಾಟಕದ ಕಾರ್ಖಾನೆಗಳು ಪ್ರತಿ ಮೆಟ್ರಿಕ್ ಟನ್ನಿಗೆ ಎಕ್ಸ್-ಫೀಲ್ಡ್ ರೂ. 2500 ಮತ್ತು ದಕ್ಷಿಣ ಕರ್ನಾಟಕದ ಕಾರ್ಖಾನೆಗಳು ಎಕ್ಸ್-ಗೇಟ್ ರೂ. 2500/- ಪಾವತಿಸಲು ಕಬ್ಬು ನಿಯಂತ್ರಣ ಮಂಡಳಿ ದರ ನಿಗದಿ ಪಡಿಸಿತ್ತು ಎಂದ ಅವರು, ದರ ನಿಗದಿ ಪಡಿಸಿರುವುದನ್ನು ಪ್ರಶ್ನಿಸಿ, ಸಿಸ್ಮಾ ಮತ್ತು ಇತರ ಸಕ್ಕರೆ ಕಾರ್ಖಾನೆಗಳು ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿದ್ದವು. ಆದರೆ ನ್ಯಾಯಾಲಯವು 6-11-2014ರಂದು ಈ ಪ್ರಕರಣದಲ್ಲಿ ತೀರ್ಪು ನೀಡಿ ಸರ್ಕಾರ ನಿಗದಿಪಡಿಸಿರುವ ಅಧಿಸೂಚನೆಯನ್ನು ಎತ್ತಿ ಹಿಡಿದಿರುತ್ತದೆ ಎಂದರು.

ಈ ಬಗ್ಗೆ ನ್ಯಾಯಾಲಯದಲ್ಲಿ ದಾಖಲಾಗಿದ್ದ ಎಲ್ಲ ರಿಟ್ ಅರ್ಜಿಗಳನ್ನು ವಜಾ ಮಾಡಿ ಸರ್ಕಾರದ ಕ್ರಮ ಸರಿಯಾಗಿದೆ ಎಂದು ನ್ಯಾಯಾಲಯವು ಆದೇಶ ಹೊರಡಿಸಿದೆ. ರಾಜ್ಯದಲ್ಲಿರುವ 4 ಕಬ್ಬು ಅರೆಯುವ ಕಾರ್ಖಾನೆಗಳು ನಿಗದಿತ ದರದಂತೆ ಕಬ್ಬು ಬೆಳೆಗಾರರಿಗೆ ಹಣ ಪಾವತಿಸಿವೆ. ಇನ್ನೂ ಹಲವು ಕಾರ್ಖಾನೆಗಳು ಹಣ

ಪಾವತಿಸಿಲ್ಲ. ಕಬ್ಬು ಬೆಳೆಗಾರರಿಗೆ ಪೂರ್ಣ ಹಣ ಪಾವತಿಸದೆ ಬಾಕಿ ಉಳಿಸಿಕೊಂಡಿರುವ ಸಕ್ಕರೆ ಕಾರ್ಖಾನೆಗಳು ನ್ಯಾಯಾಲಯದ ಆದೇಶದಂತೆ ತಕ್ಷಣ ರೈತರಿಗೆ ಹಣ ಪಾವತಿಸಬೇಕು ಎಂದರು.

ಸಕ್ಕರೆ ಕಾರ್ಖಾನೆಗಳು ಈ ಬಗ್ಗೆ ನ್ಯಾಯಾಲಕಯದಲ್ಲಿ ಮರು ಪರಿಶೀಲನಾ ಅರ್ಜಿ ಸಲ್ಲಿಸಬಹುದಾಗಿದ್ದು, ಈ ಬಗ್ಗೆ ಅಧಿಕಾರಿಗಳೊಂದದಿಗೆ ಚರ್ಚಿಸಿ ಕೇವಿಯೆಟ್ ಹಾಕಲು ನಿರ್ಧರಿಸಲಾಗಿದೆ ಎಂದರು. ಈ ಸಂದರ್ಭದಲ್ಲಿ ಸಂಸದ ಪ್ರಕಾಶ್ ಹುಕ್ಕೇರಿ ಅವರು ಉಪಸ್ಥಿತರಿದ್ದರು.

## "Live Phone-in Programme"

Bangalore, November 7 (Karnataka Information)

**"Live Phone-in Programme"** of **Hon'ble Nadoja Dr. Justice S.R. Nayak, Chairman of Law Commission of Karnataka**, (Former Chief Justice of Chhattisgarh and Chairperson, Karnataka State Human Rights Commission) will be telecast in Chandana channel (Doordarshan – Kannada) at 8.00 AM to 9.00 AM on Sunday, the 9th November, 2014 about "**Importance of Law Commission and its activities**", says a press release by the Commission